ಸಾಕ್ಷಿ ಯನ್ನು ದಿಃ06.12.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ಆರೋಪಿ ನನ್ನ ಬಳಿ ಹಣ ಕೇಳಿದ ದಿನಾಂಕ ಗೊತ್ತಿಲ್ಲ, ನಾನು ಹಣ ಕೊಡುವ ಒಂದು ವಾರದ ಮುಂಚೆ ಕೇಳಿರುತ್ತಾರೆ. ಅವರು ಹಣ ಕೇಳಲು ಆರೋಪಿ ಹಾಗೂ ಅವರ ಪತ್ನಿ ಬಂದಿದ್ದರು.
2. ನಾನು ದಿಃ 15.11.2023 ರಂದು ಹಣ ನೀಡಿರುತ್ತೇನೆ. ಸದರಿ ಹಣ ವ್ಯವಸಾಯದಿಂದ ಬಂದ ಹಣ ಮನೆಯಲ್ಲಿ ಇತ್ತು. ಶುಂಠಿಯನ್ನು ಮನೆಯ ಬಳಿಯೇ ವ್ಯಾಪಾರ ಮಾಡಿ ಹಣ ಪಡೆದಿದ್ದೆವು, ಆ ಬಗ್ಗೆ ದಾಖಲೆ ಇಲ್ಲ.
3. ಶುಂಠಿ ಮಾಡಿದರೆ ಹಣವನ್ನು ಖಾತೆಗೆ ಹಾಕುತ್ತಾರೆ ಎಂದರೆ, ಇಲ್ಲ ನಮಗೆ ನಗದು ಹಣ ನೀಡಿದ್ದರು.
4. ನಮ್ಮ ಬಳಿ ಬಿ.ಪಿ.ಎಲ್ ಪಡಿತರ ಚೀಟಿ ಇದೆ. ಬಿ.ಪಿ.ಎಲ್ ಪಡಿತರ ಚೀಟಿಯನ್ನು ಬಡತನ ರೇಖೆಗಿಂತ ಕಡಿಮೆ ಇರುವ ಜನರಿಗೆ ಮಾತ್ರ ನೀಡುತ್ತಾರೆ ಎಂದರೆ ಅದನ್ನು ಮೊದಲೇ ಮಾಡಿಸಿದ್ದೆವು. ಈಗ ನಮ್ಮ ಬಿ.ಪಿ.ಎಲ್ ಪಡಿತರ ಚೀಟಿ ರದ್ದಾಗಿಲ್ಲ.
5. ನನಗೆ ಒಬ್ಬನೇ ಮಗ ಇದ್ದು, ಆತ ಪಿಯುಸಿ ವರೆಗೆ ಓದಿದ್ದಾನೆ. ಜೆಸಿಬಿ ಹಾಗೂ ಟ್ರಾಕ್ಟರ್ ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದಾನೆ.
6. ನಿಮ್ಮ ಮಗನಿಗೆ ಓದುವಾಗ ಆದಾಯ ಪ್ರಮಾಣ ಪತ್ರವನ್ನು ಮಾಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ.
7. ನಾವು ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ.
8. ದಿಃ 10.11.2023 ರಿಂದ ಡಿಸೆಂಬರ್ 2024 ರ ವರೆಗೆ ನಿಮ್ಮ ಖಾತೆಯಲ್ಲಿ 6 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಹಣ ಇತ್ತಾ ಎಂದರೆ, ಇಲ್ಲ.
9. ನಿಮ್ಮ ಬಳಿ ದಿಃ 15.11.2023 ರಂದು 6 ಲಕ್ಷ ಹಣ ಇತ್ತು ಎಂದು ತೋರಿಸಲು ಲಿಖಿತ ದಾಖಲೆ ಇದೆಯಾ ಎಂದರೆ, ಇಲ್ಲ.
10. ನಿಪಿ -1 ರ ಚೆಕ್ಕನ್ನು ಯಾವ ಭಾಷೆಯಲ್ಲಿ ಬರೆದಿದೆ ಎಂದರೆ, ಇಂಗ್ಲೀಷ್ ನಲ್ಲಿ ಬರೆದಿದ್ದು, ಆರೋಪಿ ಕನ್ನಡದಲ್ಲಿ ಸಹಿ ಮಾಡಿರುತ್ತಾರೆ.

11. ನಿಪಿ - 1ರ ಮೇಲಿರುವ ಬರವಣಿಗೆಯನ್ನು ಆರೋಪಿ ಚೆಕ್ ನೀಡುವಾಗ ಯಾವುದೋ ಸ್ನೇಹಿತನನ್ನು ಕರೆದುಕೊಂಡು ಬಂದಿದ್ದರು, ಅವರು ಬರೆದಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ಚೆಕ್ಕನ್ನು ದಿಃ 05.12.2023 ರಂದು ಕೊಟ್ಟಿದ್ದಾರೆ.

12. ನೀವು ನೀಡಿದ ನೊಟೀಸಿಗೆ ಆರೋಪಿ ಉತ್ತರ ನೀಡಿದ್ದರಾ ಎಂದರೆ, ಸುಳ್ಳು ಪ್ರತ್ಯುತ್ತರ ನೀಡಿದ್ದರು ಎಂದು ನುಡಿಯುತ್ತಾರೆ.

13. ಹೆಚ್.ಎಸ್.ಜಯಸ್ವಾಮಿ ಎಂಬುವವರು ನನಗೆ ಗೊತ್ತಿಲ್ಲ. ಊರಿನಲ್ಲಿ ಇದರ ಸಂಬಂಧಪಟ್ಟಂತೆ ಯಾವುದೇ ತೀರ್ಮಾನ ಆಗಿಲ್ಲ. ಜಯಸ್ವಾಮಿ ಸಮ್ಮುಖದಲ್ಲಿ 10 ಸಾವಿರಕ್ಕೆ ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಅವರು ಮರುತ್ತರದಲ್ಲಿ ತಿಳಿದ್ದಾರೆ ಎಂದರೆ ಸರಿಯಲ್ಲ.

14. ನೀವು ನೊಟೀಸನ್ನು ಆರೋಪಿಗೆ ಯಾವ ವಕೀಲರಿಂದ ನೀಡಿದ್ದೀರಾ ಎಂದರೆ, ಬೇರೆ ವಕೀಲರಿಂದ ಕೊಡಿಸಿದ್ದೆ, ಅವರ ಹೆಸರು ನನಗೆ ಗೊತ್ತಿಲ್ಲ. ನಮ್ಮ ಯಜಮಾನರಿಗೆ ಗೊತ್ತು. ನೊಟೀಸು ನೀಡಲು ಮಾಹಿತಿಯನ್ನು ನಿಮ್ಮ ಪತಿ ನೀಡಿದರಾ ಎಂದರೆ, ಇಲ್ಲ ನಾನೇ ಪೋನಿನಲ್ಲಿ ಮಾತಾಡಿ ಕೊಟ್ಟಿರುತ್ತೇನೆ.

15. ನಿಮ್ಮ ಮೇಲೆ ಒಂದು ಗಾಂಜಾ ದಾಸ್ತಾನು ಮಾಡಿದ ಬಗ್ಗೆ ಕೇಸ್ ದಾಖಲಾಗಿತ್ತು ಎಂದರೆ ಸರಿಯಲ್ಲ. ಜಮೀನು ಜಗಳ ವಿಚಾರವಾಗಿ ಪ್ರಕರಣ ಇತ್ತು.

16. ಗಾಂಜಾ ಸಂಬಂಧಪಟ್ಟಂತೆ ಯಾರ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ, ನನ್ನ ಪತಿಯ ಮೇಲೆ ಆಗಿದೆ.

17. ಆರೋಪಿ ನಿಮ್ಮಿಂದ 6 ಲಕ್ಷ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

18. ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

19. ಆರೋಪಿ ಯಾವತ್ತೂ ನಿಮಗೆ ಚೆಕ್ ನೀಡಿಲ್ಲ ಹಾಗೂ ನಿಪಿ-1ರ ಮೇಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ.

20. ಆರೋಪಿಯ ಮಗಳ ಹೆಸರು ಗೊತ್ತಾ ಎಂದರೆ, ಯಶಸ್ವಿನಿ ಎಂದು ಕರೆಯುತ್ತಾರೆ, ಅವರಿಗೆ ಎರಡು ಹೆಸರು ಇವೆ. ಅವರು ಹಾಗೂ ನೀವು ವಿಶ್ವಾಸದಿಂದ ಚೆನ್ನಾಗಿದ್ದೀರಿ ಎಂದರೆ, ಅವರ ಮಕ್ಕಳು ಬರುತ್ತಿರಲಿಲ್ಲ, ಆರೋಪಿ ಮಾತ್ರ ಬರುತ್ತಿದ್ದರು. ನೀವು ಸಹ ಅವರ ಮನೆಗೆ ಹೋಗುತ್ತಿದ್ದೀರಿ ಎಂದರೆ ಸರಿ. ಆ ಸಮಯದಲ್ಲಿ ಅವರು ಬ್ಯಾಂಕಿಗೆ

ಹೋಗಲು ಅವರ ಟೇಬಲ್ ಮೇಲೆ ಇಟ್ಟಿದ್ದ ಚೆಕ್ಕನ್ನು ಎತ್ತಿಕೊಂಡು ಬಂದು ಈ ಪ್ರಕರಣ ಹಾಕಿದ್ದೀರಾ ಎಂದರೆ ಸರಿಯಲ್ಲ.

21. ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
22. ಆರೋಪಿಗೆ 6 ಲಕ್ಷ ಹಣ ನೀಡುವ ಆರ್ಥಿಕ ಸಾಮರ್ಥ್ಯ ನಿಮಗೆ ಇಲ್ಲದೇ ಇದ್ದರೂ ಹಣ ನೀಡಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಡ ಇಟ್ಟಿದ್ದ ಆರೋಪಿಯ ಮಗಳ ಒಡವೆ ಬಿಡಿಸಲು ನಮ್ಮ ಬಳಿ ಹಣ ಪಡೆದಿದ್ದರು. ಸದರಿ ವಿಚಾರವನ್ನು ದೂರಿನಲ್ಲಿ ಹೇಳಿದ್ದೇವೆ.
23. ನಿಮ್ಮ ಹೆಸರಿನಲ್ಲಿ ಆಸ್ತಿ ಇರುವ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ, ನನ್ನ ಹೆಸರಿನಲ್ಲಿ ಇಲ್ಲ ನಮ್ಮ ಪತಿಯ ಹೆಸರಿನಲ್ಲಿ ಇವೆ. ಅವನ್ನು ಹಾಜರುಪಡಿಸಿಲ್ಲ.
24. ನಾವು ಆಸ್ತಿ ಮೇಲೆ ಯಾವ ಬ್ಯಾಂಕಿನಲ್ಲೂ ಸಾಲ ಮಾಡಿಲ್ಲ. ಸೊಸೈಟಿಯಲ್ಲಿ ಮಾತ್ರ ಬಡ್ಡಿರಹಿತ ಸಾಲ ಎಂದು 80 ಸಾವಿರ ಸಾಲ ಪಡೆದಿದ್ದೇವೆ.
25. ನಿಮ್ಮ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ, 6 ಲಕ್ಷ ಹಣ ನೀಡುವ ಆದಾಯದ ಮೂಲ ನಿಮಗೆ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ